## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 630 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಪಿ ಹೆಚ್ ಪೂಜಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.07.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ನಕಲಿ ಬಿ.ಪಿ.ಎಲ್ ಕಾರ್ಡ್‌ಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ನಕಲಿ ಬಿ.ಪಿ.ಎಲ್ ಕಾರ್ಡ್‌ದಾರರ ವಿರುದ್ಧ ಕ್ರಮ ಜರುಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ನಕಲಿ ಕಾರ್ಡ್‌ಗಳನ್ನು ತಡೆಯುವಲ್ಲಿ ಸರ್ಕಾರ ಯಾವ ರೀತಿ ಯೋಜನೆ ರೂಪಿಸಿದೆ; (ಮಾಹಿತಿ ಒದಗಿಸುವುದು) | ಪಡಿತರ ಚೀಟಿಯ ದುರುಪಯೋಗವನ್ನು ತಡೆಗಟ್ಟಲು ರಾಜ್ಯ ಸರ್ಕಾರವು ರೂಪಿಸಿರುವ ಮಾನದಂಡಗಳಿಗೆ ವಿರುದ್ಧವಾಗಿ ಅಂತ್ಯೋದಯ ಅನ್ನ ಮತ್ತು ಆದ್ಯತಾ ಪಡಿತರ ಚೀಟಿಗಳನ್ನು ಪಡೆದುಕೊಂಡವರನ್ನು ಪತ್ತೆ ಹಚ್ಚುವ ಕೆಲಸವನ್ನು ನಿರಂತರವಾಗಿ ಮಾಡಲಾಗುತ್ತಿದೆ.<br>ಆಹಾರ ಇಲಾಖೆಯು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಜೊತೆ ಮಾಹಿತಿ ವಿನಿಮಯ ಮಾಡಿಕೊಂಡು ಆದಾಯ ತೆರಿಗೆ ಪಾವತಿದಾರರು, ಜಿ.ಎಸ್.ಟಿ ಮತ್ತು ವೃತ್ತಿತೆರಿಗೆ ಪಾವತಿದಾರರು, ಸರ್ಕಾರಿ ನೌಕರರು ಮತ್ತು ನಿವೃತ್ತ ನೌಕರರು, ರೂ. 1.20 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿರುವವರು ಹಾಗೂ 3 ಹೆಕ್ಟೇರ್‌ಗಿಂತ ಹೆಚ್ಚು ಜಮೀನು ಹೊಂದಿರುವವರ ಮಾಹಿತಿಯನ್ನು ಪಡೆದು ಈ ಕುಟುಂಬಗಳು ಹೊಂದಿರುವ ಪಡಿತರ ಚೀಟಿಗಳ ಜೊತೆ ತಾಳೆ ಮಾಡಿ ಅಂತವರು ಹೊಂದಿದ್ದ ಅಂತ್ಯೋದಯ ಅನ್ನ ಮತ್ತು ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳಾಗಿ ಪರಿವರ್ತಿಸಿ ಹಾಗೂ ಅನರ್ಹರಿಂದ 2020-21ನೇ ಸಾಲಿನಿಂದ ಇಲ್ಲಿಯವರೆವಿಗೂ ಒಟ್ಟು 3,41,632 ಅನರ್ಹ ಆದ್ಯತಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದ್ದು ಇವರಿಂದ ಒಟ್ಟು ರೂ. 13,75,20,710 ದಂಡ ವಸೂಲಿ ಮಾಡಲಾಗಿರುತ್ತದೆ. |
| ಆ | ರಾಜ್ಯದಲ್ಲಿ ಬಡತನ ರೇಖೆಗಿಂತ ಕಡಿಮೆ ಇರುವವರ ಸಂಖ್ಯೆ ಎಷ್ಟು; ಈಗಾಗಲೇ ಬಿ.ಪಿ.ಎಲ್ ಎ.ಪಿ.ಎಲ್ ಪಡಿತರ ಕಾರ್ಡ್‌ಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಕಾರ್ಡ್‌ಗಳ ಸಂಖ್ಯೆ ಈ ಕೆಳಕಂಡಂತಿವೆ:-<br>ಅಂತ್ಯೋದಯ ಅನ್ನ ಯೋಜನೆ: 10,84,009; ಆದ್ಯತಾ ಪಡಿತರ ಚೀಟಿ: 1,16,52,660; ಆದ್ಯತೇತರ ಪಡಿತರ ಚೀಟಿ: 25,00,790; ಒಟ್ಟು: 1,52,37,459<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ -1 ರಲ್ಲಿ ಒದಗಿಸಲಾಗಿದೆ. |

| ಅಂತ್ಯೋದಯ ಅನ್ನ ಯೋಜನೆ | ಆದ್ಯತಾ ಪಡಿತರ ಚೀಟಿ | ಆದ್ಯತೇತರ ಪಡಿತರ ಚೀಟಿ | ಒಟ್ಟು |
|---|---|---|---|
| 10,84,009 | 1,16,52,660 | 25,00,790 | 1,52,37,459 |

| | | |
|---|---|---|
| ೩ | ಹೊಸ ಬಿ.ಪಿ.ಎಲ್ ಪಡಿತರ ಕಾರ್ಡ್‌ಗಳನ್ನು ನೀಡಲು ಸರ್ಕಾರ ಮುಂದಾಗಿದೆಯೇ; ಅವುಗಳನ್ನು ಯಾವ ಕಾಲ ಮಿತಿಯಲ್ಲಿ ನೀಡಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಆನಾಸ 211 ಡಿಆರ್‌ಎ 2021, ದಿನಾಂಕ: 03.12.2021 ಮತ್ತು 28.11.2022 ರನ್ವಯ 2,76,459 ಹಾಗೂ 1,55,927 ಹೊಸ ಆದ್ಯತಾ ಪಡಿತರ ಚೀಟಿಯನ್ನು ಕೋರಿ ಸಲ್ಲಿಸಿರುವ 2,76,459 ಹಾಗೂ 1,55,927 ಅರ್ಹ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ ಆನಾಸ 211 ಡಿಆರ್‌ಎ 2021 ದಿನಾಂಕ: 29.09.2023 ರಲ್ಲಿ 2,95,986 ಅರ್ಜಿಗಳ ವಿಲೇವಾರಿ ಬಗ್ಗೆ ಆದೇಶಿಸಲಾಗಿರುತ್ತದೆ. ಇದರಲ್ಲಿ 62,595 ಹೊಸ ಪಡಿತರ ಚೀಟಿಯನ್ನು ವಿತರಿಸಲಾಗಿದೆ. 56,940 ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ ಬಾಕಿ ಇರುವ 176451 ಅರ್ಜಿಗಳ ಕುರಿತು ಸ್ಥಳ ಪರಿಶೀಲನೆ ಮಾಡಲಾಗಿದೆ. ಈ ಅರ್ಹರಿಗೆ ಹೊಸ ಪಡಿತರ ಚೀಟಿ ನೀಡಲು ತ್ವರಿತವಾಗಿ ವಿಲೇವಾರಿ ಮಾಡಲು ರಾಜ್ಯದ ಜಂಟಿ/ ಉಪ ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರಿಗೆ ನಿರ್ದೇಶನ ನೀಡಲಾಗಿರುತ್ತದೆ.<br>ತುರ್ತು ವೈದ್ಯಕೀಯ ಸಂದರ್ಭಗಳಲ್ಲಿ ಅರ್ಹ ಆದ್ಯತಾ ಪಡಿತರ ಚೀಟಿದಾರರಿಗೆ ನಿರಂತರವಾಗಿ ಪಡಿತರ ಚೀಟಿ ನೀಡುವ ಕಾರ್ಯ/ಪಡಿತರ ಚೀಟಿ ತಿದ್ದುಪಡಿ ಕಾರ್ಯ ನಡೆಯುತ್ತಿದೆ. |

ಆನಾಸ 223 ಡಿಆರ್‌ಎ 2024 (ಇ-ಆಫೀಸ್)

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

# ಅನುಬಂಧ-01

## ಶ್ರೀ. ಪಿ. ಹೆಚ್. ಪೂಜಾರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 630

| Sl. No. | DISTRICT | AAY RCs | PHH RCs | NPHH RCs | TOTAL RCs |
|---|---|---|---|---|---|
| 1 | BAGALKOTE | 45,798 | 3,68,981 | 63,628 | **4,78,407** |
| 2 | BALLARI | 25,935 | 2,73,296 | 43,766 | **3,42,997** |
| 3 | BANGALORE EAST | 2,448 | 80,745 | 85,214 | **1,68,407** |
| 4 | BANGALORE NORTH | 2,600 | 1,12,145 | 68,021 | **1,82,766** |
| 5 | BANGALORE SOUTH | 5,505 | 1,12,397 | 75,051 | **1,92,953** |
| 6 | BANGALORE WEST | 4,455 | 1,88,063 | 1,06,224 | **2,98,742** |
| 7 | BELAGAVI | 68,047 | 10,68,009 | 3,23,177 | **14,59,233** |
| 8 | BENGALURU | 12,722 | 4,93,078 | 1,03,266 | **6,09,066** |
| 9 | BENGALURU RURAL | 14,321 | 2,15,014 | 23,181 | **2,52,516** |
| 10 | BIDAR | 40,008 | 3,10,962 | 53,753 | **4,04,723** |
| 11 | CHAMARAJANAGARA | 35,622 | 2,54,118 | 14,740 | **3,04,480** |
| 12 | CHIKKABALLAPURA | 28,387 | 2,80,268 | 19,298 | **3,27,953** |
| 13 | CHIKKAMAGALURU | 22,201 | 2,41,154 | 64,879 | **3,28,234** |
| 14 | CHITRADURGA | 42,110 | 3,59,049 | 44,465 | **4,45,624** |
| 15 | DAKSHINA KANNADA | 22,961 | 2,54,721 | 1,73,759 | **4,51,441** |
| 16 | DAVANAGERE | 45,365 | 3,27,169 | 45,887 | **4,18,421** |
| 17 | DHARWAR | 29,617 | 3,54,955 | 95,979 | **4,80,551** |
| 18 | GADAG | 28,378 | 2,26,196 | 38,763 | **2,93,337** |
| 19 | HASSAN | 23,365 | 4,28,002 | 43,442 | **4,94,809** |
| 20 | HAVERI | 46,798 | 3,45,082 | 56,197 | **4,48,077** |
| 21 | KALABURAGI | 62,309 | 5,07,936 | 1,15,485 | **6,85,730** |
| 22 | KODAGU | 9,597 | 1,01,205 | 37,178 | **1,47,980** |
| 23 | KOLAR | 29,713 | 3,10,350 | 36,017 | **3,76,080** |
| 24 | KOPPAL | 37,376 | 2,89,738 | 27,351 | **3,54,465** |
| 25 | MANDYA | 34,329 | 4,41,644 | 57,537 | **5,33,510** |
| 26 | MYSURU | 50,334 | 6,58,417 | 1,11,066 | **8,19,817** |
| 27 | RAICHUR | 52,179 | 4,01,328 | 42,483 | **4,95,990** |
| 28 | RAMANAGARA | 18,918 | 2,76,141 | 17,869 | **3,12,928** |
| 29 | SHIVAMOGGA | 37,788 | 3,51,320 | 1,03,431 | **4,92,539** |
| 30 | TUMAKURU | 49,459 | 6,01,992 | 66,584 | **7,18,035** |
| 31 | UDUPI | 28,187 | 1,69,058 | 1,15,069 | **3,12,314** |
| 32 | UTTARA KANNADA | 16,137 | 2,92,562 | 90,269 | **3,98,968** |
| 33 | VIJAYANAGARA | 40,476 | 2,58,640 | 33,427 | **3,32,543** |
| 34 | VIJAYAPURA | 41,355 | 4,58,614 | 86,729 | **5,86,698** |
| 35 | YADGIR | 29,209 | 2,40,311 | 17,605 | **2,87,125** |
| | | | | | |
| **TOTAL** | | **10,84,009** | **1,16,52,660** | **25,00,790** | **1,52,37,459** |

ಅಪರ ನಿರ್ದೇಶಕರು (ಐಟಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ